ನಿ-72
ಕ್ರ-205
146ನೇ ಅಧಿವೇಶನ
ಕಂಟ್ರೋಲ್

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಅರವಿಂದ ಕುಮಾರ್ ಅರಳಿ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆ.**

**ಸೂಚನೆ** ಬಚಾವತ್ ನ್ಯಾಯಮಂಡಳಿ ನೀಡಿರುವ ತೀರ್ಪಿನ ಪ್ರಕಾರ ಗೋದಾವರಿ ಜಲಾನಯನ ಪ್ರದೇಶದಿಂದ ಬೀದರ ಜಿಲ್ಲೆಯು ಒಟ್ಟು 22.47 ಟಿ.ಎಂ.ಸಿ ನೀರು ಉಪಯೋಗಿಸಲು ಅನುಮತಿ/ಅವಕಾಶ ಇರುತ್ತದೆ. ಆದರೆ ಬೀದರ್ ಜಿಲ್ಲೆಯ ಜನರ ದುರಾದೃಷ್ಟದಿಂದ ಕಾರಂಜಾ ಜಲಾಶಯದಿಂದ 7, ಚುಳಕಿ ನಾಲಾ ಜಲಾಶಯದಿಂದ 1 ಮತ್ತು ಮಾಂಜ್ರಾ ಬ್ರಿಡ್ಜ್-ಕಂ-ಬ್ಯಾರೇಜ್‌ನಿಂದ 1 ಟಿಎಂಸಿ ಹೀಗೆ ಒಟ್ಟು ಕೇವಲ 9.00 ಟಿಎಂಸಿ ನೀರು ಮಾತ್ರ ಬಳಕೆಯಾಗುತ್ತಿದ್ದು, ಇನ್ನುಳಿದ 13.47 ಟಿ.ಎಂ.ಸಿ ನೀರು ಬೀದರ್ ಜಿಲ್ಲೆಯಿಂದ ಪೋಲಾಗಿ ಹೋಗುತ್ತಿದೆ. ಕಾರಂಜಾ ಜಲಾಶಯದಲ್ಲಿ ಹೂಳು ತುಂಬಿದ್ದು ಸದ್ಯ ಕೇವಲ 5.00 ಟಿಎಂಸಿ ನೀರು ಮಾತ್ರ ಬಳಕೆಗೆ ಶೇಖರಿಸಲಾಗುತ್ತದೆ. ಉಳಿದ 2.00 ಟಿಎಂಸಿ ಅಡಿ ನೀರು ಇದರಿಂದ ಪೋಲಾಗುತ್ತದೆ.

ಕರ್ನಾಟಕ ಸರ್ಕಾರವು ಬೀದರ್ ಜಿಲ್ಲೆಯಲ್ಲಿ ಹರಿಯುವ ಗೋದಾವರಿ ಜಲಾನಯನ ಪ್ರದೇಶದಿಂದ ಒಟ್ಟು 22.47 ಟಿಎಂಸಿ ನೀರು ಉಪಯೋಗಿಸಿಕೊಳ್ಳಲು ವಿಫಲವಾಗಿರುವ ಕಾರಣ ಪಕ್ಕದ ತೆಲಂಗಾಣ ಸರ್ಕಾರವು ಮಾಂಜ್ರಾ ನದಿಯಿಂದ ಪೋಲಾಗಿ ಹೋಗುತ್ತಿರುವ 15.00 ಟಿಎಂಸಿ ನೀರಿನ ಸದ್ಬಳಕೆಗಾಗಿ ತೆಲಂಗಾಣ ರಾಜ್ಯದ ನಾರಾಯಣ ಖೇಡ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಸವೇಶ್ವರ ಬೃಹತ್ ಏತ ನೀರಾವರಿ ಯೋಜನೆಯೊಂದಕ್ಕೆ ವಿದ್ಯುಕ್ತವಾಗಿ 'ಚಾಲನೆ ನೀಡಿ ಯೋಜನೆಯ ಅನುಷ್ಠಾನಕ್ಕಾಗಿ ರೂ.1,774/- ಕೋಟಿ ಅನುದಾನ ಸಹ ಬಿಡುಗಡೆ ಮಾಡಿರುವ ವಿಷಯವನ್ನು ನಾನು ನಮ್ಮ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಯೋಜನೆಯ ಟೆಂಡರ್ ಪ್ರಕ್ರಿಯೆ ಪ್ರಗತಿ ಹಂತದಲ್ಲಿದೆ.

ತೆಲಂಗಾಣ ಸರ್ಕಾರದ ಈ ಚಾಣಾಕ್ಷತನದ ಯೋಜನೆ ಪೂರ್ಣಗೊಂಡಲ್ಲಿ ನಾರಾಯಣ ಖೇಡ ತಾಲ್ಲೂಕಿನ ಒಟ್ಟು 6 ಮಂಡಲಗಳ 130 ಗ್ರಾಮಗಳ ರೈತರ 1.65 ಲಕ್ಷ ಎಕರೆ ಒಣ ಭೂಮಿಗೆ ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯ ದೊರೆಯಲಿದೆ. ಕೇವಲ 1.00 ಟಿಎಂಸಿ ಅಡಿ ನೀರಿನಿಂದ ರೈತರ 11.500 ಎಕರೆ ಒಣ ಭೂಮಿಗೆ ಒಂದು ಸಲ ನೀರು ಉಣಿಸಬಹುದಾಗಿದೆ.

ಆದ್ದರಿಂದ ನಾನು ಬೀದರ ಜಿಲ್ಲೆಯ ಸಮಗ್ರ ರೈತಾಪಿ ಜನರ ಹಿತ ದೃಷ್ಟಿಯಿಂದ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ಬೀದರ ಜಿಲ್ಲೆಯಿಂದ ಪೋಲಾಗಿ ಹೋಗುತ್ತಿರುವ 13.47 ಟಿಎಂಸಿ ಅಡಿ ನೀರಿನ ಬಳಕೆಗಾಗಿ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ತುರ್ತು ಕ್ರಮ ಜರುಗಿಸುವ ಕುರಿತು.

**ಉತ್ತರ:-** ಬಚಾವತ್ ನ್ಯಾಯಮಂಡಳಿ ನೀಡಿರುವ ಐತಿರ್ಪಿನ ಪ್ರಕಾರ ಗೋದಾವರಿ ಕಣಿವೆಯಿಂದ ಕರ್ನಾಟಕ ರಾಜ್ಯಕ್ಕೆ ಒಟ್ಟು 22.37 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡಲಾಗಿತ್ತು. ಸದರಿ ಆದೇಶವನ್ನು ಪರಿಷ್ಕರಿಸಿ, ದಿನಾಂಕ:08.08.2003 ರಂದು ಗೋದಾವರಿ ಕಣಿವೆಯಿಂದ ಕರ್ನಾಟಕ ರಾಜ್ಯಕ್ಕೆ ಒಟ್ಟು 18.86 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಮರು ಹಂಚಿಕೆ ಮಾಡಿರುತ್ತಾರೆ. ಕರ್ನಾಟಕ ನೀರಾವರಿ ನಿಗಮದಡಿ ಬರುವ ಯೋಜನೆಗಳಿಗೆ ಮಾಡಿರುವ ಮರು ಹಂಚಿಕೆಯ ವಿವರಗಳು ಈ ಕೆಳಗಿನಂತಿವೆ:

| ಕ್ರ.ಸಂ. | ಯೋಜನೆಗಳ ವಿವರ | ನೀರಿನ ಹಂಚಿಕೆ/ಬಳಕೆ (ಟಿ.ಎಂ.ಸಿ) | ಷರಾ |
|---|---|---|---|
| 1) | ಕಾರಂಜಾ ಯೋಜನೆ | 9.27 | ಹಂಚಿಕೆಯಾಗಿರುವ 9.27 ಟಿ.ಎಂ.ಸಿ.ಯ ನೀರನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. |

| | | | | |
|---|---|---|---|---|
| 2) | ಚುಳಕಿನಾಲಾ ಯೋಜನೆ | 1.17 | | ಹಂಚಿಕೆಯಾಗಿರುವ 1.17 ಟಿ.ಎಂ.ಸಿ.ಯ ನೀರನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. |
| 3) | ಸರಣಿ ಬ್ಯಾರೇಜುಗಳು: | | | |
| | 1. ಚಂದಾಪುರ | 0.78 | 4.80 | ಸದರಿ ಮಾಂಜ್ರಾ ನದಿಗೆ ಅಡ್ಡಲಾಗಿ ಸರಣಿ ಬ್ಯಾರೇಜುಗಳನ್ನು ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತದಿಂದ ನಿರ್ಮಿಸಲಾಗಿರುತ್ತದೆ. ಸರ್ಕಾರದ ಆದೇಶದಂತೆ ಸದರಿ ಬ್ಯಾರೇಜುಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿದೆ. |
| | 2. ಹಾಲಹಳ್ಳಿ | 2.46 | | |
| | 3. ಮಾಣಿಕೇಶ್ವರ | 0.78 | | |
| | 4. ಜೀರಗಿಹಾಳ | 0.78 | | |
| | | **15.24** | | |

ಒಟ್ಟಾರೆಯಾಗಿ ಗೋದಾವರಿ ಕಣಿವೆಯಿಂದ ಕರ್ನಾಟಕ ನೀರಾವರಿ ನಿಗಮದಡಿ ಬರುವ ಯೋಜನೆಗಳಿಗೆ ಮರು ಹಂಚಿಕೆಯಾದ ನೀರಿನಲ್ಲಿ **15.24** ಟಿ.ಎಂ.ಸಿ. ನೀರನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ

ಕಾರಂಜಾ ಜಲಾಶಯದ ಒಟ್ಟು ನೀರಿನ ಸಾಮರ್ಥ್ಯ 7.691 ಟಿ.ಎಂ.ಸಿ. ಇದ್ದು, ಇಂದಿನ ದಿನಾಂಕ:28–03–2022ರ ನೀರಿನ ಶೇಖರಣೆ ಸಾಮರ್ಥ್ಯ 6.325 ಟಿ.ಎಂ.ಸಿ. ಇರುತ್ತದೆ. ಕಾರಂಜಾ ಅಣೆಕಟ್ಟಿನಿಂದ ಬೀದರ ಪಟ್ಟಣಕ್ಕೆ 0.3870 ಟಿ.ಎಂ.ಸಿ. ಭಾಲ್ಕಿ ಪಟ್ಟಣಕ್ಕೆ 0.3 ಟಿ.ಎಂ.ಸಿ. ಹುಮನಾಬಾದ ಮತ್ತು ಚಿಟಗುಪ್ಪಾ 0.3 ಟಿ.ಎಂ.ಸಿ., ಕಮಠಾಣಾ ಮತ್ತು 26 ಹಳ್ಳಿಗಳಿಗೆ 0.0283 ಟಿ.ಎಂ.ಸಿ. ಹೀಗೆ ಒಟ್ಟಾರೆಯಾಗಿ ಕುಡಿಯುವ ನೀರಿನ ಸಲುವಾಗಿ 1.0053 ಟಿ.ಎಂ.ಸಿ. ನೀರು ಕಾಯ್ದಿರಿಸಲಾಗಿದೆ. ಬಾಕಿ 8.265 ಟಿ.ಎಂ.ಸಿ ನೀರನ್ನು ನೀರಾವರಿಗಾಗಿ ಬಳಕೆ ಮಾಡಲಾಗುತ್ತಿದೆ. ಹೀಗೆ ಒಟ್ಟಾರೆಯಾಗಿ ಕಾರಂಜಾ ಯೋಜನೆಗೆ ಮರು ಹಂಚಿಕೆಯಾಗಿರುವ 9.27 ಟಿ.ಎಂ.ಸಿ.ಯ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಚುಳಕಿನಾಲಾ ಜಲಾಶಯದ ಒಟ್ಟು ನೀರಿನ ಸಾಮರ್ಥ್ಯ 0.938 ಟಿ.ಎಂ.ಸಿ. ಇದ್ದು, ಇಂದಿನ ದಿನಾಂಕ:28–03–2022ರ ನೀರಿನ ಶೇಖರಣೆ ಸಾಮರ್ಥ್ಯ 0.818 ಟಿ.ಎಂ.ಸಿ. ಇರುತ್ತದೆ. ಸದರಿ ಯೋಜನೆಗೆ ಹಂಚಿಕಯಾಗಿರುವ ಒಟ್ಟು 1.17 ಟಿ.ಎಂ.ಸಿ.ಯ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಮಾಂಜ್ರಾ ನದಿಗೆ ಅಡ್ಡಲಾಗಿ ಸರಣಿ ಬ್ಯಾರೇಜುಗಳನ್ನು ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತದಿಂದ ನಿರ್ಮಿಸಲಾಗಿದ್ದು, ಪ್ರಸ್ತುತ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿದ್ದು, 04 ಸರಣಿ ಬ್ಯಾರೇಜ್‌ಗಳಿಗೆ ಒಟ್ಟು **4.80** ಟಿ.ಎಂ.ಸಿ.ವಾರು ಹಂಚಿಕೆಯಾಗಿರುತ್ತದೆ. ಸದರಿ ಬ್ಯಾರೇಜ್‌ಗಳಿಂದ ಯಾವುದೇ ಶಾಶ್ವತ ನೀರಾವರಿ ಸೌಲಭ್ಯವಿಲ್ಲದಿರುವುದರಿಂದ . ಸದರಿ ಬ್ಯಾರೆಜುಗಳಿಂದ ನೀರಾವರಿಗಾಗಿ ರೈತರು ಪಂಪ್‌ಸೆಟ್ ಗಳ ಮೂಲಕ ನೀರನ್ನು ಬಳಸಿಕೊಳ್ಳುತ್ತಿದ್ದಾರೆ.

ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಸರಣಿ ಬ್ಯಾರೇಜುಗಳಿಂದ ಪೂರ್ಣ ಪ್ರಮಾಣದ ನೀರಾವರಿ ಯೋಜನೆಯನ್ನು ಕೈಗೊಳ್ಳಲು ಬೀದರ್ ಜಿಲ್ಲೆಯ 15 ಕೆರೆಗಳ ನೀರಿನ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವ ಮತ್ತು 9,535 ಹೆಕ್ಟೇರ್ ನೀರಾವರಿ ಕ್ಷೇತ್ರ ಕಲ್ಪಿಸುವ ರೂ.647.94 ಕೋಟಿ ಮೊತ್ತದ ಬಸವಕಲ್ಯಾಣ (ಗೌರ) ಏತ ನೀರಾವರಿ ಯೋಜನೆಯನ್ನು ಆರ್ಥಿಕ ಇಲಾಖೆಯು ದಿನಾಂಕ:02.03.2021 ರಂದು ನೀಡಿರುವ ಅಭಿಪ್ರಾಯದಲ್ಲಿ ಯೋಜನೆಯನ್ನು ಮುಂದೂಡುವಂತೆ ತಿಳಿಸಿರುತ್ತದೆ, ಪ್ರಸ್ತುತ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಕಾರಂಜಾ ಜಲಾಶಯದಲ್ಲಿ ಇಲ್ಲಿಯವರೆಗೆ ಹೂಳೆತ್ತಿರುವುದಿಲ್ಲ. ಮುಂದುವರೆದು, ಜಲಾಶಯದಲ್ಲಿ ಸಂಗ್ರಹವಾದ ಹೂಳಿನ ಕುರಿತು ಅಧ್ಯಯನ ನಡೆಸಲು, Executive Engineer, Resource Engineering centre, Dindori Road, Nasik, Maharastra ರವರನ್ನು ಕೋರಲಾಗಿದ್ದು, ಅವರಿಂದ ವರದಿ ನಿರೀಕ್ಷಣೆಯಲ್ಲಿರುತ್ತದೆ.

**ಜಸಂಇ 122 ಎಂಎಲ್‌ಎ 2022**

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು